"ತಲೆ ಸಮ ಉಂಟನ್ರೀ ನಿಮಗೆ?" ರೇಗಿದ್ದಳು ಮೀನಾಕ್ಷಿ. 'ತಲೆ ಸಮ ಇದ್ದಿದ್ರೆ ಹೀಗ್ಯಾಕಾಗ್ತಿತ್ತು?' ಎನ್ನುವ ಮಾತನ್ನು ಬಾಯ್ಬಿಟ್ಟು ಆಡಿ ಗಾಯದ ಮೇಲೆ ಬರೆ ಎಳೆಯಲು ಹೋಗಿರಲಿಲ್ಲ ಜನಾರ್ದನ.

★★★

ಚಿನ್ನ ತರುತ್ತೇವೆಂದು ಹೇಳಿ ಬರಿಗೈಲಿ ವಾಪಸಾದವರನ್ನು ಕಂಡು ಕುತೂಹಲದಿಂದ ಕೇಳಿದ್ದಳು ನೇತ್ರಾ,

"ಅದ್ಯಾಕೆ ಹಾಗೇ ಬಂದ್ರಿ? ಪೇಟೆ ಸುತ್ಕೊಂಡು ಬರೋಕೆ ಹೋಗಿದ್ದಾ ನೀವು?"

"ನಾವು ಯಾವತ್ತೂ ಖರೀದಿ ಮಾಡೋ ಅಂಗಡೀಲಿ ಬಾಗಿಲು ಮುಚ್ಚಿತ್ತು ಕಣೇ. ಬೇರೆ ಕಡೆ ಹೋಗೋಕೆ ಮನಸ್ಸಾಗ್ಲಿಲ್ಲ.."

"ಮತ್ತೆ? ಇಷ್ಟು ಹೊತ್ತು ಏನ್ಮಾಡ್ತಿದ್ರಿ?"

ಹೇಳಬೇಕು. ಹೇಳಿಬಿಡಬೇಕು. ಶರೀರವೇ ಗುಟ್ಟು ಬಿಟ್ಟುಕೊಡುವ ವಿಷಯವನ್ನು ಎಷ್ಟು ದಿನ ಮುಚ್ಚಿಟ್ಟುಕೊಳ್ಳಲು ಸಾಧ್ಯ? ಉಗುಳು ನುಂಗುತ್ತಾ ಹೇಳಿದ್ದ ಜನಾರ್ದನ,

"ಹಂಗೇ ಡಾಕ್ಟ್ರ ಹತ್ರ ಹೋಗ್ಬಂದ್ವಿ ಪುಟ್ಟೀ. ನಿಮ್ಮಮ್ಮಂಗೆ..."

"ಏನಾಗಿದೆ ಅಮ್ಮಂಗೆ?" ಗಾಬರಿಯಿಂದ ಕೇಳಿದ್ದಳು ನೇತ್ರಾ.

"ಏನಿಲ್ಲಪ್ಪಾ..."

"ಮತ್ತೆ?"

"ಮತ್ತೆ ನಿಂಗೊಬ್ಬ ತಮ್ಮನೋ, ತಂಗೀನೋ ಬರ್ತಾರಂತೆ..." ಅಯ್ಯಬ್ಬಾ, ಹೇಳಬೇಕಾದ್ದನ್ನು ಹೇಳಿ ಮುಗಿಸಿದ್ದಾಯ್ತು. ಜನಾರ್ದನ ನಿಟ್ಟುಸಿರೆಳೆದಿದ್ದ. ಮೀನಾಕ್ಷಿ ಅಲ್ಲಿರಲೇ ಇಲ್ಲ. ಕೈಕಾಲು ತೊಳೆದು ಬರುವ ಹೆಳೆಯಲ್ಲಿ ಬಚ್ಚಲು ಹೊಕ್ಕಿದ್ದಳು. ಮಗಳ ಪ್ರತಿಕ್ರಿಯೆ ಏನಿರಬಹುದು ಎನ್ನುವ ಆತಂಕದಲ್ಲಿ ಮಗಳ ಕಡೆ ನೋಡಿದ್ದ ಜನಾರ್ದನ. ಅಲ್ಲಿ ಅವನ ನಿರೀಕ್ಷೆಯ ಯಾವ ಚಿಹ್ನೆಯೂ ಕಾಣದೆ ಮುಖ ಬಿಗಿದುಕೊಂಡಿತ್ತು. ಮುದ್ದಿನ ಮಗಳು ಬಾಯ್ಬಿಟ್ಟು ಹೇಳಿದ್ದಳು,

"ಇದೆಲ್ಲಾ ಬೇಕಿತ್ತಾ ಅಪ್ಪಾ, ಈ ವಯಸ್ಸಲ್ಲಿ..."

ಮುಖದ ಮೇಲೆ ಥೂತ್ಕರಿಸಿ ಉಗಿದಂತೆ ಬಂದೆರಗಿತ್ತು ಮಗಳ ಮಾತು. ಬೇಕಾಗಿರಲಿಲ್ಲ. ದೇವರಾಣೆ ಬೇಕಾಗಿರಲಿಲ್ಲ. ಪರಾಮೋಷಿ. 'ಬೆಳ್ಳಿ ಮೋಡ' ಕಾದಂಬರಿಯಲ್ಲಿ ಇಂತಾ ಸಂದರ್ಭದಲ್ಲಿ ಮಗಳು ಅಮ್ಮನಾಗಿ ತಾಯಿಯನ್ನು ಪೊರೆದಿದ್ದನ್ನು ಓದಿದ ನೆನಪು ಜನಾರ್ದನನಿಗಿದೆ. ಇಲ್ಲಿ ನೋಡಿದರೆ ಪರಿಸ್ಥಿತಿ ಬೇರೆಯದೇ ತಿರುವು ತೆಗೆದುಕೊಳ್ಳುವ ಲಕ್ಷಣ ಕಾಣಿಸುತ್ತಿದೆ. ಧುಮುಗುಡುತ್ತಾ ಹೇಳಿದ್ದಳು ಮಗಳು,

"ಬ್ಯಾಡಾಂತ ತೆಗಿಸಿಕೊಂಡು ಬರೋದಲ್ವಾ? ನೆಟ್ಟಗೆ ಬಂದ್ಬಿಟ್ಟಿದೀರಿ?"

"ಈ ಪರಿಸ್ಥಿತೀಲಿ ಆಗಲ್ಲ ಅಂತಿದಾರೆ ಕಣೇ ಡಾಕ್ಟ್ರು."

"ನನ್ನ ಕರ್ಮ..." ಮಗಳು ಹಣೆ ಚಚ್ಚಿಕೊಂಡು ತನ್ನ ಕೋಣೆ ಹೊಕ್ಕಿದ್ದಳು. ಎಲ್ಲವನ್ನೂ ಕೇಳಿಸಿಕೊಂಡೂ ಕೇಳಿಸಿಕೊಳ್ಳದವಳಂತೆ ಬಾಣಂತಿ ಆರೈಕೆಗೆ ಕರೆಸಿಕೊಂಡಿದ್ದ ಪದ್ದಯ್ಯನ ಮಗಳು ಮಾಲಕ್ಷ್ಮಿ ಕೋಣೆಯೊಳಗೆ ಮಗುವಿನ ಅಂಡಡಿಯ ಉಚ್ಚೆಬಟ್ಟೆ ಬದಲಿಸುವುದರಲ್ಲಿ ಮಗ್ನಳಾಗಿದ್ದಳು.

★★★

'ಇದೆಲ್ಲಾ ಬೇಕಿತ್ತಾ ಅಪ್ಪಾ?' ಕಾದ ಸೀಸದಂತೆ ಕಿವಿ ಹೊಕ್ಕಿದ್ದ ಮಗಳ ಮಾತು